## ಚಿಂಚೋಳಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳು

೧೦೯. ಶ್ರೀ ದೇವೇಂದ್ರಪ್ಪ ಘಾಳಪ್ಪ (ಚಿಂಚೋಳಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಗುಲ್ಬರ್ಗ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿರುವ ಒಟ್ಟು ಸಣ್ಣ ನೀರಾವರಿ ಕೆರೆಗಳ ಬಗ್ಗೆ ಆಯಾ ಗ್ರಾಮಗಳ ಹೆಸರುಗಳೊಂದಿಗೆ ಪಟ್ಟಿಯನ್ನು ಕೊಡಿರಿ ?

(ಆ) ಅವುಗಳ ಪೈಕಿ, ಎಷ್ಟು ಕೆರೆಗಳು ಒಳ್ಳೆಯ ಸ್ಥಿತಿಯಲ್ಲಿದ್ದು ಸಂಪೂರ್ಣ ಆಯಾ ಕಟ್ಟಿಗೆ ನೀರು ಒದಗಿಸುತ್ತಿವೆ ;

(ಇ) ಅಂಥ ಕೆರೆಗಳ ಪೈಕಿ ಎಷ್ಟು ಕೆರೆಗಳಿಗೆ ದುರಸ್ತಿ ಅಗತ್ಯವಿದೆ ;

(ಈ) ಸರಕಾರವು ಪ್ರತಿ ಕೆರೆಯ ದುರಸ್ತಿಯ ಬಗ್ಗೆ ಕೈಕೊಂಡಿರುವ ಕ್ರಮವೇನು ? (ಆಯಾ ಕಾಮಗಾರಿಗಳ ವಿವರಗಳನ್ನು ಕೊಡಿರಿ)

ಶ್ರೀ ಆರ್. ಎನ್. ಲಕ್ಷ್ಮೀಪತಿ (ರಾಜ್ಯದ ಸಣ್ಣ ನೀರಾವರಿ ಮಂತ್ರಿಗಳು).—

(ಅ) ಚಿಂಚೋಳಿ ತಾಲ್ಲೂಕಿನಲ್ಲಿ ೧೪ ಸಣ್ಣ ನೀರಾವರಿ ಕೆರೆಗಳಿವೆ. (ಪಟ್ಟಿ ಲಗತ್ತಿಸಿದೆ)

(ಆ) ೯ ಕೆರೆಗಳು.

(ಇ) ೫ ಕೆರೆಗಳು

(ಈ) ೫ ಕೆರೆಗಳಿಗೆ ಆಗಬೇಕಾಗಿರುವ ದುರಸ್ತಿಯನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. (ಪಟ್ಟಿ ಲಗತ್ತಿಸಿದೆ)

### ಅನುಬಂಧ ೧

ಚಿಂಚೋಳಿ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಕೆರೆಗಳ ಪಟ್ಟಿ ಗ್ರಾಮಗಳ ಹೆಸರುಗಳೊಂದಿಗೆ.

| ಕ್ರಮ ಸಂಖ್ಯೆ | ಕೆರೆಯ ಹೆಸರು | ಗ್ರಾಮದ ಹೆಸರು |
|---|---|---|
| ೧ | ತುಮಕುಂಟ ಕೆರೆ | ತುಮಕುಂಟ |
| ೨ | ಹುಡದ ಹಳ್ಳಿ ಕೆರೆ | ಹುಡದ ಹಳ್ಳಿ |
| ೩ | ಚಂದನ್ ಕೇರಾ ಕೆರೆ | ಚಂದನ ಕೇರಾ |
| ೪ | ಧೋತಿ ಕೊಳ ಕೆರೆ | ಧೋತಿ ಕೊಳ |
| ೫ | ಚಿಕ್ಕಲಿಂಗದ ಹಳ್ಳಿ ಕೆರೆ | ಚಿಕ್ಕಲಿಂಗದ ಹಳ್ಳಿ |
| ೬ | ನಾಗೈದಲ್ಲಿ ಕೆರೆ | ನಾಗೈದಲ್ಲಿ ಕೆರೆ |
| ೭ | ಹುಲಸ್ ಗುಡ್ ಕೆರೆ | ಹುಲಸ ಗುಡ್ |
| ೮ | ಐನಾಪುರ ಕೆರೆ | ಐನಾಪುರ |
| ೯ | ಮುಖ್ರುಂಬಾ ಕೆರೆ | ಮುಖ್ರುಂಬಾ |
| ೧೦ | ನಿಡಗುಂದಾ ಕೆರೆ | ನಿಡಗುಂದಾ |
| ೧೧ | ಮಿರ್‌ಯಾನ್ ಕೆರೆ | ಮಿರ್‌ಯಾನ್ |
| ೧೨ | ರಟ್‌ಕಲ್ | ರಟ್‌ಕಲ್ |
| ೧೩ | ಕೊಲ್ಲೂರ್ ಕೆರೆ | ಕೊಲ್ಲೂರು |
| ೧೪ | ಸಾಲ್‌ಗಾರ್ ಕೆರೆ | ಸಾಲ್‌ಗಾರ್ |

ಅನುಬಂಧ—೩

ಚಿಂಚೋಳಿ ತಾಲ್ಲೂಕಾದಲ್ಲಿರುವ ಸಣ್ಣ ನೀರಾವರಿ ಕೆರೆಗಳ ಪಟ್ಟಿ ಗ್ರಾಮಗಳ ಹೆಸರುಗಳೊಂದಿಗೆ

| ಕ್ರಮ ಸಂಖ್ಯೆ | ಕೆರೆಯ ಹೆಸರು | ಗ್ರಾಮದ ಹೆಸರು | ಅಂದಾಜಿನ ಮೊಬಲಗು (ಲಕ್ಷ ಗಳಲ್ಲಿ) | ಕಟ್ಟಿದ ವರ್ಷ | ಅಂದಾಜಿನ ಪ್ರಕಾರ ಆಚ್ಚು ಕಟ್ಟು (ಹೆಕ್ಟೇರುಗಳಲ್ಲಿ) | ದುರಸ್ತಿಗು ವಿವರ ಮತ್ತು ಆಗಬಹುದಾದ ಖರ್ಚು |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧ | ನಿಡಗುಂದ ಕೆರೆ | ನಿಡಗುಂದ | — | — | ೪೬ | ಈ ಕೆರೆಯು ಹಳೆಯ ಹೈದರಾಬಾದ್ ರಾಜ್ಯದಿಂದ ೧೯೬೫ರಲ್ಲಿ ಕಂದಾಯ ಇಲಾಖೆಯ ಮೂಲಕ ವರ್ಗಾಹಿಸಲ್ಪಟ್ಟ ಕೆರೆ ಕಟ್ಟಿದ ವರ್ಷ ಗೊತ್ತಿಲ್ಲ. ಸುಮಾರು ನೂರು ವರ್ಷಕ್ಕೂ ಹಿಂದಿನ ಹಳೆಯ ಕೆರೆಯು ತುಂಬಾ ಹೂಳು ತುಂಬಿದೆ. ಕೆರೆಯ ಅಂಗಳವೂ ಯಾರ ಒಡೆತನದಲ್ಲಿದೆ, ಎಂಬು ದನ್ನು ತಿಳಿದುಕೊಂಡು ಈ ಕೆರೆಯ ಹೂಳು ತೆಗೆಯುವ ಕೆಲಸ ಕೈಗೊಳ್ಳಲಾಗುವುದು. ಇದರ ಅಂದಾಜು ಸುಮಾರು ೧.೫ ಲಕ್ಷ. |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೨ | ಮಿರಯಾನ್ ಕೆರೆ | ಮಿರಯಾನ್ | — | — | ೨೯ | ಈ ಕೆರೆಯೂ ಸಹ ಹಳೆಯ ಹೈದರಾಬಾದ್ ರಾಜ್ಯದಿಂದ ೧೯೬೫ ರಲ್ಲಿ ಕಂದಾಯ ಇಲಾಖೆಯ ಮೂಲಕ ವರ್ಗಾಹಿಸಲ್ಪಟ್ಟ ಕೆರೆ ಸುಮಾರು ನೂರು ವರ್ಷಕ್ಕೂ ಹಿಂದಿನ ಕೆರೆ ಕೆರೆಯ ತುಂಬಾ ಹೂಳು ತುಂಬಿದೆ. ಈ ಕೆರೆಯ ಅಂಗಳ ಯಾರ ಒಡೆತನದಲ್ಲಿದೆ ಎಂದು ತಿಳಿದುಕೊಂಡು ಈ ಕೆರೆಯ ಹೂಳು ತೆಗೆಯುವ ಕೆಲಸವನ್ನು ಮಿತವ್ಯಯದ್ದಾದರೆ ಕೈಕೊಳ್ಳಲಾಗುವುದು. ಇದರ ಅಂದಾಜು ವೆಚ್ಚ ೨ ೦೦ ಲಕ್ಷ. |
| ೩ | ರಟಕಲ್ ಕೆರೆ | ರಟಕಲ್ | ೧.೭೩ | ೩/೭೧ | ೪೧ | ಈ ಕೆರೆಯ ಅಂಗಳದಿಂದ ನೀರು ಜಿನಗುವುದರಿಂದ ಕೆರೆಯ ನೀರೆಲ್ಲಾ ಒಂದೇ ತಿಂಗಳಿನಲ್ಲಿ ಖಾಲಿ ಆಗುತ್ತದೆ. ಆದ್ದರಿಂದ ಈ ಜಿನಗನ್ನು ತಡೆಯಲು ಸೂಕ್ತ ಕ್ರಮಗಳನ್ನು ಆರ್ಥಿಕ ಶಕ್ಯತೆ ಯನ್ನು ಆಧರಿಸಿ ಕೈಕೊಳ್ಳಲಾಗುವುದು. ಈ ಕೆರೆಯ ಆಚ್ಚುಕಟ್ಟು ೪೧ ಹೆಕ್ಟೇರು. ದುರಸ್ತಿಯ ಅಂದಾಜು ಸುಮಾರು ೨.೫ ಲಕ್ಷ |
| ೪ | ಕೊಲ್ಲೂರು ಕೆರೆ | ಕೊಲ್ಲೂರು | — | — | ೧೧೨ | ಈ ಕೆರೆಯೂ ಸಹ ಹಳೆಯ ಹೈದರಾಬಾದ್ ರಾಜ್ಯದಿಂದ ಕಂದಾಯ ಇಲಾಖೆಯ ಹೂಲಕ ೧೯೬೫ರಲ್ಲಿ ವರ್ಗಾಯಿಸಲ್ಪಟ್ಟ ಕೆರೆ ಈ ಕೆರೆ ಕಟ್ಟಿದ ದಿನಾಂಕ ಗೊತ್ತಿಲ್ಲ. ಸುಮಾರು ನೂರು ವರ್ಷಕ್ಕೂ ಹಿಂದಿನ ಕೆರೆ. ಈ ಕೆರೆಯ ಒಡೆತವನ್ನು ಮತ್ತೆ ತುಂಬಲು ಸುಮಾರು ೧೦ ವರ್ಷಗಳ ಹಿಂದೆ ಕೈಗೊಳ್ಳಲಾಗಿತ್ತು ಮತ್ತೆ ಕೆರೆಯ ಏರಿಯೂ ಜಾರುತ್ತಿರುವುದರಿಂದ ಕರ್ನಾಟಕ, ತಾಂತ್ರಿಕ ಸಂಶೋಧನಾ ಕೇಂದ್ರ ಕೃಷ್ಣರಾಜ ಸಾಗರದ ಪರ ಸಲಹೆ ಪಡೆದು ಈ ಕೆರೆಯನ್ನು ಪೂರ್ಣವಾಗಿ ದುರಸ್ತಿ ಗೊಳಿಸಲಾಗುವುದು ಇದರ ಅಂದಾಜು ವೆಚ್ಚ ೫ ಲಕ್ಷ. |

| ೧ | ೨ | ೩ | ೪ | ೫ | ೬ |
|---|---|---|---|---|---|
| ೫ | ಸಾಲಿಗಾರ್ ಕೆರೆ | ಸಾರ್ಗಾವ | ೫೦,೦೦೦ | ೩/೭೧ | ೧೫ |

ಈ ಕೆರೆಯನ್ನು ೧೯೭೧ರ ಕಾಲದಲ್ಲಿ ೬ಫ ಕಾಮಗಾರಿ ನಡಿಯಿಂದ ಕಟ್ಟಿ ಅಂಬಿಸಲು. ಕೆರೆಯಂ ತೂಬಿನ ಬಳಿ ನೀರಿಂ ನೆೞಲಂತ್ಪಿರುವುದನ್ನು ಕಾಣಲಾಗಿದೆ. ಈ ಕೆರೆಯು ಒಟ್ಟು ಜೀರ್ಣಪಟ್ಟಿಯನ್ನು ಪರೀಕ್ಷಿಸಿ ಕೆರೆಗೆ ಆಗಬೇಕಾದ ದುರಸ್ತಿಯನ್ನು ಗೊೞ್ಳಲಾಗುವುದು. ಈ ಕೆರೆಗೆ ಒಂದು ೪. ಮಿ. ಉದ್ದದ ಕಾಲುವೆ ೯ದೆ. ಆದರೆ ಕಾಲುವೆ ಆಗಿದಿರುವುದು ೦.೧೫ ೫. ಮಿ. ದೂರ ಮಿಕ್ಕೆ ಭೂಗದಲ್ಲಿ ಗಟ್ಟಿ ಒಂಡೆ ಸಿಕ್ಕಿರುವುದರಿಂದ ಕಾಲುವೆಯನ್ನು ಕೆಲಸ ನಡೆದಿಲ್ಲ. ಈ ವಿಸಕ್ಕೆ ಕಾಲುವೆ ಕೆಲಸ ಮಾಡಲು ಪರಿಸ್ಥಿಯ ಒಟ್ಟು ಅಂದಾಜು ಸಂಪಾಯ ೫೦,೦೦೦

ಶ್ರೀ ದೇವೇಂದ್ರಪ್ಪ ಫಾಳಪ್ಪ.—ಚಿಂಚೋಳಿ ತಾಲ್ಲೂಕಿನಲ್ಲಿ ೯ ಕೆರೆಗಳ ಮೂಲಕ ವ್ಯವಸಾಯಕ್ಕೆ ನೀರನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ ಮತ್ತು ೫ ಕೆರೆಗಳಿಗೆ ದುರಸ್ತಿ ಆಗತ್ಯವಿದೆ ಎಂದು ಹೇಳಿದ್ದೀರಿ. ಇದರ ಪ್ರಕಾರ ಆದಷ್ಟೂ ಜಾಗ್ರತೆ ಈ ೫ ಕೆರೆಗಳ ಹೂಳು ತೆಗೆಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಈ ಕೆರೆಗಳು ಸಂಪೂರ್ಣವಾಗಿ ಹೂಳಿನಿಂದ ತುಂಬಿ ಹೋಗಿದೆ. ಇವುಗಳ ನಿರ್ಮಾಣ ನೂರಾರು ವರ್ಷಗಳ ಹಿಂದೆ ಆಗಿರುವುದು. ಕೆಲವು ಕೆರೆಗಳಿಗೆ ಹೂಳು ತೆಗೆಸುವುದು ಆರ್ಥಿಕವಾಗಿ ಲಾಭದಾಯಕವಲ್ಲವೆಂದು ಸರ್ಕಾರ ಪರಿಗಣಿಸಿದೆ.

ಶ್ರೀ ದೇವೇಂದ್ರಪ್ಪ ಫಾಳಪ್ಪ.—ಕೆರೆಗಳಲ್ಲಿರುವ ಹೂಳು ತೆಗೆಸಿ ರೈತರಿಗೆ ಆದಷ್ಟೂ ಸಹಾಯ ಮಾಡುವುದಾಗಿ ಮುಖ್ಯಮಂತ್ರಿಗಳೇ ಹೇಳಿದ್ದಾರೆ; ಅದರ ಪ್ರಕಾರ ತಾವು ಈ ಕೆರೆಗಳ ಹೂಳು ತೆಗೆಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಕ್ಷಾಮ ನಿವಾರಣೆಗಾಗಿ ಕೆಲಸ ಕೈಕೊಳ್ಳಲು ಸರ್ಕಾರ ಹಣ ಒದಗಿಸಿದಾಗ ಈ ಕೆಲಸವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಲ್ಯಾಂಡ್-ಆರ್ಮಿ ಮೂಲಕ ಈ ಕೆರೆಗಳ ಹೂಳು ತೆಗೆಸಲಾಗುವುದೆಂದು ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ತಾವು ಈ ರೀತಿ ಹೇಳುತ್ತಿದ್ದೀರಿ. ಇದರಿಂದ ದ್ವಂದ್ವ ಅಭಿಪ್ರಾಯ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರಲ್ಲಿ ಯಾವುದು ಸರಿ ಎಂಬುದನ್ನು ತಿಳಿಸಬೇಕು ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಇವು ನೂರಾರು ವರ್ಷಗಳ ಹಿಂದೆ ಕಟ್ಟಿಸಿದಂಥ ಕೆರೆಗಳು. ಇವುಗಳಲ್ಲಿ ಈಗ ಹೂಳು ತುಂಬಿಕೊಂಡಿದೆ. ಈ ಹೂಳನ್ನು ತೆಗೆಸುವುದು ಒಳ್ಳೆಯದು. ಆದರೆ ಒಂದು ಎಕರೆಯಲ್ಲಿ ಹೂಳು ತೆಗೆಸಲು ಹತ್ತು ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಇಷ್ಟು ಹಣದಲ್ಲಿ ಹೊಸ ಕೆರೆಗಳನ್ನೇ ಕಟ್ಟಿಸಬಹುದು. ಹಳೆಯ ಕೆರೆಗಳ ಹೂಳು ತೆಗೆಸಿದರೆ ಅದನ್ನು ಎಲ್ಲಿ ಹಾಕಬೇಕು ಎಂಬ ಪ್ರಶ್ನೆಯೂ ಬರುತ್ತದೆ. ಆದ್ದರಿಂದ.....

ಶ್ರೀ ಎಸ್. ಬಂಗಾರಪ್ಪ.—ಈ ಕೆಲಸ ಮಾಡಿಸುವುದಾಗಿ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.—ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಈ ಹೂಳು ತೆಗೆಸುವ ಕೆಲಸವನ್ನು ಇಲ್ಲಿಯವರೆಗೆ ಆಳವಡಿಸಿರಲಿಲ್ಲ. ಆದರೆ ಇನ್ನು ಮುಂದೆ ಎಲ್ಲೆಲ್ಲಿ ಹೂಳು ತೆಗೆಸಲು ಸಾಧ್ಯ ಅಲ್ಲೆಲ್ಲಾ ಈ ಯೋಜನೆಯ ಅಡಿಯಲ್ಲಿ ತೆಗೆಸಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಈ ನಿರ್ಣಯದ ಆಧಾರದ ಮೇಲೆ ಹೇಳಿರುವುದು. ಎನ್.ಆರ್.ಇ.ಪಿ. ಮೂಲಕ ಎಲ್ಲೆಲ್ಲಿ ಈ ಕೆಲಸ ಮಾಡಿಸಲು ಸಾಧ್ಯ ಅಲ್ಲೆಲ್ಲಾ ಮಾಡಿಸಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಲ್ಯಾಂಡ್-ಆರ್ಮಿ ಮೂಲಕವಾಗಲೀ, ಎನ್ಆರ್.ಇ.ಪಿ. ಮೂಲಕವಾಗಲೀ ಅಥವಾ ಸಣ್ಣ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿಯಾಗಲೀ ಈ ಕೆಲಸವನ್ನು ಕೈಕೊಳ್ಳುತ್ತೀರಾ? ಒಟ್ಟಿನಲ್ಲಿ ಕೆರೆಗಳಲ್ಲಿರುವ ಹೂಳನ್ನು ತೆಗೆಸಬೇಕೆಂಬುದೇ ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.—ಈಗ ಎನ್.ಆರ್.ಇ.ಪಿ. ಗ್ರ್ಯಾಂಟ್‌ನಲ್ಲಿ ಹತ್ತು ಎಕರೆಯೊಳಗಿದ್ದರೆ ಆಯಾ ತಾಲ್ಲೂಕ್ ಬೋರ್ಡಿನ ಮೂಲಕ ಈ ಕೆಲಸ ಮಾಡಿಸಲಾಗುತ್ತದೆ. ಅದಕ್ಕಿಂತ ಜಾಸ್ತಿ ಇದ್ದರೆ ಲೋಕೋಪಯೋಗಿ ಇಲಾಖೆ ಮೂಲಕ ಮಾಡಿಸಲಾಗುತ್ತದೆ. ಈ ಕೆಲಸವನ್ನು ಲ್ಯಾಂಡ್-ಆರ್ಮಿ ಮೂಲಕವು ಮಾಡಿಸಬಹುದು. ಇದರ ಜೊತೆಗೆ ಉದ್ಯೋಗ ದೃಢೀಕರಣ ಯೋಜನೆಯ ಮೂಲಕ ಬರುವ ಹಣವನ್ನು ಈ ಕೆಲಸಕ್ಕಾಗಿ ಖರ್ಚು ಮಾಡಬಹುದೆಂದು ನಿರ್ಣಯ ಮಾಡಿದ್ದೇವೆ. ದಿನಗೂಲಿ ಆಧಾರದ ಮೇಲೆ ಈ ಕೆಲಸವನ್ನು ಮಾಡಿಸಲಾಗುತ್ತದೆ. ಸಾರಾಸಗಟಾಗಿ ಎಲ್ಲಾ ಕೆರೆಗಳ ಹೂಳನ್ನು ತೆಗೆಸಲು ಹೋದರೆ ಆ ಮಣ್ಣನ್ನು ಎಲ್ಲಿ ಹಾಕಬೇಕೆಂಬ ಪ್ರಶ್ನೆ ಬರುತ್ತದೆ. ಇದರ ಬದಲು ಹೊಸ ಕೆರೆಗಳನ್ನು ಕಟ್ಟಿಸಬಹುದು. ಆದ್ದರಿಂದ ಉದ್ಯೋಗ ದೃಢೀಕರಣ ಯೋಜನೆಯ ಮೂಲಕ ಕೆಲವು ಕೆರೆಗಳ ಹೂಳನ್ನು ತೆಗೆಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ದೇವೆಂದ್ರಪ್ಪ ಘಾಳಪ್ಪ.–ಚಿಕ್ಕಲಿಂಗದ ಹಳ್ಳಿ ಕೆರೆಯ ಕೆಲಸವನ್ನ ನವ್ಮ ಸರ್ಕಾರ ಮಾಡಿದ್ದು. ಇದಕ್ಕೆ ವಿಶ್ವಬ್ಯಾಂಕ್‌ನ ನೆರವು ಸಿಕ್ಕಿದೆ. ಇದರ ಒಡ್ಡಿನ ಕೆಲಸ ಆಗಿದೆ, ಆದ್ದರಿಂದ ಇನ್ನುಳಿದ ಕೆಲಸವನ್ನು ಆದಷ್ಟೂ ತೀವ್ರವಾಗಿ ಮಾಡಿ ಮುಗಿಸಲು ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಇದನ್ನು ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು.—ಇಲ್ಲಿಗೆ ಪ್ರಶ್ನೋತರ ಕಾಲ ಮುಗಿಯಿತು.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು.

ಉಪಾಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಆರನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

## ಶೋರಾಪುರ ತಾಲ್ಲೂಕಿನಲ್ಲಿ ಕೆಂಭಾವಿಯಿಂದ ಮುಲ್ಲಿಗೆಗೆ ಯಾಲ್ಗ ಮೂಲಕ ರಸ್ತೆ ನಿರ್ಮಾಣ ಕುರಿತಂ.

೧೨. ಶ್ರೀ ಬಾಪುಗೌಡ ದರ್ಶನಾಪುರ (ಶಹಪುರ).—ಮಾನ್ಯ ಲೋಕೊಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಶೋರಾಪುರ ತಾಲ್ಲೂಕಿನಲ್ಲಿ ಕೆಂಬಾವಿಯಿಂದ ಯಾಲ್ಗ ಮಾರ್ಗವಾಗಿ ಮುಲ್ಲಹಳ್ಳಿಗೆ ಹೋಗುವ ರಸ್ತೆ ಇದೆಯೇ?

(ಆ) ಹಾಗಿದ್ದಲ್ಲಿ ಆ ರಸ್ತೆಯ ಹೆಸರು ಯಾವ ವರ್ಗೀಕರಣ ಅಂದರೆ ಜಿಲ್ಲಾ ಲೋಕೋಪಯೋಗಿ ಅಥವಾ ಗ್ರಾಮಾಂತರ ರಸ್ತೆಗಳ ಪಟ್ಟಿಯಲಿ ಸೇರಿದೆಯೇ?

(ಇ) ಈ ರಸ್ತೆಯ ಪರಿಸ್ಥಿತಿ ಬಹಳ ಅವ್ಯವಸ್ಥೆಯಲ್ಲಿ ಉಸ್ತುವಾರಿ ಮಾಡಿದ್ದು ಮತ್ತು ರಸ್ತೆಯ ನಿರ್ಮಾಣ ಕೆಲಸವು ಅಪೂರ್ಣವಾಗಿರುವುದು ನಿಜವೇ?

(ಈ) ಹಾಗಿದ್ದಲ್ಲಿ, ಸರ್ಕಾರವು ಉಸ್ತುವಾರಿಯು ಸಲುವಾಗಿ ತೆಗೆದುಕೊಂಡ ಕ್ರಮಗಳಾವುವು?

(ಉ) ಈ ರಸ್ತೆಯನ್ನು ಜಿಲ್ಲಾ ಲೋಕೋಪಯೋಗಿ ಇಲಾಖೆ ರಸ್ತೆಯಾಗಿ ಪರಿವರ್ತಿಸುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು, ಈ ರಸ್ತೆ ಇದೆ.

(ಆ) ಕೆಂಬಾವಿಯಿಂದ ಯಾಲ್ಗ ಮಾರ್ಗವಾಗಿ ಮುಲ್ಲಿಗೆಯವರೆಗೆ ಶಹಪುರ, ಬಿಜಾಪುರ ರಸ್ತೆಯವರಿಗೂ ಇದು ಲೋಕೋಪಯೋಗಿ ಇಲಾಖೆಯ ರಸ್ತೆಯಾಗಿದ್ದು ಗ್ರಾಮಾಂತರ ರಸ್ತೆಯ ವರ್ಗೀಕರಣದಲ್ಲಿ ಸೇರಿರುತ್ತದೆ.

(ಇ) ಇಲ್ಲ. ಇದು ನಿಜವಲ್ಲ.

(ಈ) ಸದ್ಯದಲ್ಲಿ ಈ ರಸ್ತೆಯನ್ನು ಮೇಲು ಉಸ್ತುವಾರಿಗೆ ಕೊಟ್ಟಂತ ಅನುದಾನದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.

(ಉ) ರಸ್ತೆ ಮೇಲ್‌ವರ್ಗೀಕರಣಕ್ಕೆ ಬೇಕಾದ ಪ್ರಸ್ತಾಪನೆಯನ್ನು ಸಕಾಲದಲ್ಲಿ ಪರಿಶೀಲಿಸಲಾಗುವುದು.